ಅನ್ನ

ಅರ್ಥಾತ್

ಎಮ್‌ಟೀ ಚುಟುಕಂಗಳು

★

ಪ್ರಿ. ವಿ. ಕೃ. ಗೋಕಾಕ ಅವರ
ಮುನ್ನುಡಿಯೊಡನೆ

ಎಂ. ಅಕಬರ ಅಲಿ * ತೋಫಖಾನೆ ಶ್ರೀನಿವಾಸ

ಯುವಕ ಕಲಾವೃಂದ ಬೆಳಗಾವಿ

[illegible] (ಕವನಸಂಗ್ರಹ)

— ಪಶುಪತಿ

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೩	೩	ಅರವಿನ	ಅರಿವಿನ
೫	೧೪	ಸಲ್ಲಸಿದ	ಸಲ್ಲಿಸಿದ
೧೮	೯	ಕೂಂಕು	ಕೊಂಕು
೨೭	೩	ಕಚ್ಚೆ	ಕಚ್ಚೆ
೨೭	೧೩	ತಾನೇ	ತಾನೆ
೨೯	೩	ತೊಕಡಿಕೆ	ತೂಕಡಿಕೆ

ಪ್ರಕಟನೆ—೧

ಅನ್ನ

ಅರ್ಥಾತ್

ಎರ್ಮ್ಟೀ ಚುಟುಕುಗಳು

ಎಂ. ಅಕಬರ ಅಲಿ

ಕೋಷ್ಠಖಾನೆ ಶ್ರೀನಿವಾಸ

ಪ್ರಕಾಶಕರು :
ಬಿ. ಎ. ಸನದಿ
ಯುವಕ ಕಲಾವೃಂದ ಬೆಳಗಾವಿ

ಪುಸ್ತಕ ದೊರೆಯುವ ಸ್ಥಳ:

ಟಿ. ವೆಂಕಟೇಶ
೧೭೦೬ ರಾಮದೇವ ಬೀದಿ, ಬೆಳಗಾವಿ
ಮತ್ತು
ಮಹಾಂತ ಗುಲಗಂಜಿ
ಆಶಾಸಾಹಿತ್ಯ ಮಂದಿರ, ವಿಜಾಪೂರ

ಮುದ್ರಕರು :
ಎಸ್. ವ್ಹಿ. ರೇಗೆ
ಕೃಷ್ಣ ಪ್ರಿಂಟಿಂಗ ಪ್ರೆಸ್, ಬೆಳಗಾವಿ

ಮುನ್ನುಡಿ

ಈ ಚಿಕ್ಕ ಸಂಗ್ರಹಕ್ಕೆ ನಾನೊಂದು ಮುನ್ನುಡಿ ಬರೆಯಬೇಕೆಂದು ಈ ನನ್ನ ತರುಣ ಸ್ನೇಹಿತರಿಬ್ಬರು ಕೇಳಿದರು. ಬಿಲ್ಲು ಅವರದು; ಬಾಣಗಳ ಬತ್ತಳಿಕೆ ಅವರದು; ಬಿಲ್ಲುಗಾರಿಕೆ ಅವರದು. ಈ ಧನುರ್ಧಾರಿಗಳು ಇಟ್ಟಗುರಿ ಮನನೀಯವಾದದು; ಹೆದೆಯೇರಿಸಿದ ಬಾಣ ನುರಿತ ಕೈವಾಡವನ್ನು ತೋರಿಸುವಂತಹದು. ಈ ಶರಸಂಧಾನಕ್ಕೆ "ತಥಾಸ್ತು" ಎನ್ನುವದೇನು ದೊಡ್ಡ ಮಾತಲ್ಲ.

ಶ್ರೀ ಅಕಬರ ಅಲಿ ಅವರ ಅಷ್ಟಷಟ್ಪದಿಗಳ ಶೈಲಿಯ ಬಿಗುವನ್ನೂ ಭಾವ ನಿರ್ಭರತೆಯನ್ನೂ ರಸಿಕರು ಆಗಲೇ ಕಂಡುಕೊಂಡಿದ್ದಾರೆ. ಆ ಹಾದಿಯಲ್ಲಿಯೇ ಶ್ರೀ ಅಕಬರ ಅಲಿಯವರು ಇಲ್ಲಿ ಮುಂದಡಿಯಿಟ್ಟಿದ್ದಾರೆ. ಅವರ ಕಾವ್ಯವು ಇಲ್ಲಿ ತೊಟ್ಟ ತೊಡಿಗೆ ಇನ್ನಿಷ್ಟು ಚೆಲುವಾಗಿ ಅದಕ್ಕೆ ಒಪ್ಪುತ್ತಿದೆ. ಶ್ರೀ ತೋಫಖಾನೆಯವರ ಚುಟ್ಕಗಳಲ್ಲಿಯೂ ಅದೇ ಸಂಯಮವನ್ನು ನಾವು ಅನೇಕ ಸಲ ಕಾಣುತ್ತೇವೆ. ಈ ಸ್ನೇಹಿತರಿಬ್ಬರ ಹೆಸರುಗಳ ಪ್ರಥಮಾಕ್ಷರಗಳು ಸೇರಿ 'ಎಮ್‌ಟಿ' ಎಂಬ ಆಂಗ್ಲ ಶಬ್ದವು ಸಿದ್ಧವಾಗುತ್ತಿದ್ದರೂ ಒಂದೊಂದು ಚುಟ್ಕವೂ ಅರ್ಥಗರ್ಭಿತವಾದುದನ್ನು ರಸಿಕರು ಕಾಣದೆ ಇರಲಾರರು. ಉದಾತ್ತ ಜೀವನಾದರ್ಶಗಳ ಬೆಳಕಿನಲ್ಲಿ ಇಂದಿನ ಸಾಮಾಜಿಕ ಜೀವನವನ್ನು ಅಳೆದು ನೋಡುವದರಲ್ಲಿಯೇ ಈ ಚುಟ್ಕಗಳ ಸ್ಫೂರ್ತಿಯು ಉಗಮವಿದೆ. ಉಚಿತ ಹಾಸ್ಯ ವಿಡಂಬನೆಗಳಿಂದ ಈ ಜೀವನ ವಿಮರ್ಶೆ ತನ್ನ ಮೊನೆಯನ್ನು ತೀಕ್ಷ್ಣವಾಗಿಸಿಕೊಂಡಿದೆ.

ಇಂಗ್ಲೀಷಿನಲ್ಲಿ 'Limerick' (ಲಿಮರಿಕ್) ಎಂಬ ಚುಟ್ಕದ ಪದ್ಧತಿಯಿದೆ. ಮಾತಿನ ಬಿಗುವು ಹಾಗೂ ಚಮತ್ಕಾರ, ಅದು ಎದ್ದು ಕಾಣುವಂತೆ ಅದನ್ನು ಕಳೆಗಟ್ಟಿಸುವ ಪ್ರಾಸ, ಸೂಕ್ಷ್ಮ ವಿಮರ್ಶೆ, ಕೊನೆಯ ಸಾಲಿನಲ್ಲಿ ಅನಿರೀಕ್ಷಿತವಾಗಿ ಬರುವ ಭಾವಾವಿಷ್ಕರಣ ಇಲ್ಲವೆ ಮುಕ್ತಾಯ—ಇವು 'ಲಿಮರಿಕ್' ಹಾಗೂ ಚುಟ್ಕದ ವಿಶೇಷ ಲಕ್ಷಣಗಳು. ಕಾವ್ಯಪುರುಷನು ಒಮ್ಮೊಮ್ಮೆ ಕಾಲಭೈರವನಾಗುವದುಂಟು. ಆಗ ಬಿಳಿ-ಕರಿ ಚೇಳುಗಳು ಅವನ ಆಭರಣಗಳಾಗುತ್ತವೆ. ಚುಟ್ಕಗಳು ಇಂಥ ಆಭರಣಗಳು. ಚೇಳು ಬಿಳಿಯದಿ

ರಲಿ, ಇಲ್ಲವೆ ಕರ್ರಗಿರಲಿ, ಅದರ ಕೊಂಡಿಯ ಮೊನೆ ಏಳು ಲೋಕಗಳನ್ನೂ ಎಚ್ಚರಿಸಬಲ್ಲುದು. ಅದು ವಿಷದ ಮೊನೆಯಲ್ಲ, ಸೂಜಿಮದ್ದಿನ ಸೂಜಿ; ವಿಷವೆಂದರೂ ಸಮಾಜದ ದೇಹಕ್ರಿಯೆಗೆ ಬೇಕಾದ ವಿಷ; ಅಂತೇ ಪರಮೌಷಧ.

'ಲಿಮರಿಕ್' ಎಂಬ ಕವನ ಪದ್ಧತಿಯು ಸುಮಾರು ಎರಡು ನೂರು ವರ್ಷಗಳಿಗೆ ಮೇಲ್ಪಟ್ಟು ಆಂಗ್ಲ ಜಾನಪದದಲ್ಲಿ ಪ್ರಚಲಿತವಾಗಿದ್ದು ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಎಡ್ ವರ್ಡ ಲಿಯರ್ ಎಂಬ ಕವಿಯಿಂದ ಸಾಹಿತ್ಯದಲ್ಲಿ ಭದ್ರವಾಗಿ ಪ್ರಸ್ಥಾಪಿತವಾಯಿತು. ಮೊದಲಿಗೆ ಬರಿ ಗಜರಗಳೆಯ ಗೀತಿಕೆಯಾಗಿದ್ದ ಲಿಮರಿಕ್ ಕ್ರಮೇಣ 'ಹೋಳಿಹುಣ್ಣಿಮೆ'ಯ ಪದಗಳಂತೆ ಬೀಭತ್ಸವಾಗಿ ಲೈಂಗಿಕ ವಿಷಯಗಳನ್ನು ಮುಖ್ಯ ವಸ್ತುವಾಗಿಸಿಕೊಂಡಿತು. ಮುಂದೆ ಅದರ ಕಾವ್ಯ ವಸ್ತುಕ್ಷೇತ್ರ ವಿಸ್ತಾರವಾಗುತ್ತ ನಡೆದು ತಾತ್ವಿಕ ವಿವೇಚನೆ ಸಹ ಅದರ ಬಳಕೆಯಲ್ಲಿ ಬಂದಿತು ಉದಾಹರಣೆಗಾಗಿ ಒಂದು ಲಿಮರಿಕ್ ಗೀತಿಕೆಯನ್ನು ಇಲ್ಲಿ ಎತ್ತಿ ತೋರಿಸಬಹುದು:

There was a young man who said: "Damn!
It is borne upon me that I am
An engine which moves
In predestinate grooves,
I'm not even a bus; I'm a tram!"

ನವ್ಯ ಕಾವ್ಯದಲ್ಲಿ ಚುಟ್ಕದ ರೀತಿಯನ್ನು ವಿವಿಧವಾಗಿ ಸಿಂಗರಿಸಬಹುದಾಗಿದೆ. ವಿಧವಿಧದ ಬಣ್ಣಗಳ ಪ್ರಕಾಶವನ್ನು ತೋರಿಸಿ ಮಿನುಗುವ ನಕ್ಷತ್ರದಂತೆ ಅದು ಚಮಕಿಸಬಹುದಾಗಿದೆ.

ಕನ್ನಡದ ಚುಟ್ಕಕ್ಕೂ ಒಂದು ಪರಂಪರೆ ಇದೆ. ಶಿಶುಗೀತಗಳಲ್ಲಿಯ ಪ್ರಾಸಗಳಲ್ಲಿ ಒಂದು ಚಮತ್ಕಾರ ಕಂಡು ಬಂದಿತು. ಅವುಗಳಲ್ಲಿ ಆಗೀಗ ಕಂಡು ಬರುವ ಸಂಯಮ ಹಾಗೂ ಆ ಪ್ರಾಸಗಳ ಚಮತ್ಕಾರವನ್ನು ನೆನೆದು ಚುಟ್ಕವು ತಲೆಯೆತ್ತಿತು. ಶ್ರೀ ವಿ. ಜಿ. ಭಟ್ಟರು ಚುಟ್ಕಗಳನ್ನು ರಚಿಸುವದರಲ್ಲಿ ಒಂದು ಅನುಪಮ ಆನಂದವನ್ನು ಅನುಭವಿಸಿದರು. ಇಂತಹ ಆನಂದವನ್ನೇ ತಮ್ಮದೇ ಆದ ಒಂದು ರೀತಿಯಲ್ಲಿ 'ಎಮ್‌ಟೀ' ಅವರು ಅನುಭವಿಸುತ್ತಿದ್ದಾರೆ. ಇವರಿಬ್ಬರ ಕೈಯಲ್ಲಿ 'ಚುಟ್ಕ'ವು ವ್ಯಾಪ್ತಿಯನ್ನು ಪಡೆದಿದೆ.

“ ಅಪ್ಪ ಅವ್ವ ಅಣ್ಣ
ದುಡಿದು ದುಡಿದು ಸಣ್ಣ
ಆದರೂನು
ದೊರೆಯಲಿಲ್ಲ
ಒಂದು ತುತ್ತು ಅನ್ನ ”

ಎಂದು ಚುಟ್ಕವು ಕರುಣೋಕ್ತಿಯಾದರೆ

“ ಪುಸ್ತಕ ತೆರೆದರೆ ಆಕಳಿಕೆ
ಬರುವದು ಭರದಲಿ ತೂಕಡಿಕೆ
ಓದಿಗೆ ನಿದ್ದೆಗೆ
ಜಿದ್ದೇ ಬಿದ್ದಿದೆ
ಶಂಕರ, ಸಾಕೆಲೆ ಈ ಕಲಿಕೆ ! ”

ಎಂಬಲ್ಲಿ ‘ ಟೀ ’ ಅವರು ವಿಡಂಬನೆಗೆ ಒಂದು ನವೀನ ಸ್ವಾರಸ್ಯವನ್ನು ತಂದು ಕೊಟ್ಟಿದ್ದಾರೆ.

ನವೀನ ಕಾವ್ಯ ಪ್ರಕಾರಗಳ ಬಳಕೆ ಹೆಚ್ಚಿದಾಗ, ಇದು ಅವಶ್ಯಕವೆ, ನಾಡು–ನುಡಿಗಳ ಜೀವನಕ್ಕೆ ಇದು ಅನುರೂಪವಾಗಿದೆಯೋನೆಂಬ ಸಂದೇಹ ವೇಳುವದು ಸ್ವಾಭಾವಿಕವಾಗಿದೆ. ಆದರೆ ಅನಾವಶ್ಯಕವಿದ್ದಲ್ಲಿ ಇಂತಹ ಬಳಕೆ ಹೆಚ್ಚಾಗುವದೇ ಸಾಧ್ಯವಿಲ್ಲವೆಂಬುದನ್ನು ನಾವು ಗಮನಿಸಬೇಕು. ನಾಡು ನುಡಿಗಳ ಜೀವನಕ್ಕೆ ಅನುರೂಪವಾಗದೆ ಇಂತಹ ಬಳಕೆ ಆದೀತು ಹೇಗೆ? ಬಳಕೆಯಲ್ಲಿ ತರುಣ ಕವಿಗಳೂ ನಾಡ ಮಣ್ಣಿನಲ್ಲಿಯೇ ತಲೆ ಯೆತ್ತಿದವರು; ನಾಡ–ನುಡಿಯನ್ನೇ ಆಡುವವರು. ಇಂಥ ಬಳಕೆಗೆ ‘ಹೌದು’, ‘ಅಲ್ಲ’ ಎನ್ನುವ ಎಲ್ಲರನ್ನು ಕೂಡಿಯೇ ಒಂದು ನಾಡಾಗುತ್ತದೆ.

‘ ಎಮ್‌ಟೀ ’ ಅವರ ಕಾವ್ಯ ಇನ್ನೂ ವಿಸ್ತಾರವಾಗಿ ನಾಡಿನ ಸಂಸ್ಕೃತಿ ಯನ್ನು ಹೆಚ್ಚಿಸಲಿ. ಇಂತಹ ವಿಸ್ತಾರಕ್ಕೆ ಅವಶ್ಯಕವಾದ ಅನುಕೂಲಗಳು ಅವರವಾಗಲಿ.

ಕೊಲ್ಹಾಪುರ
೨-೪-೧೯೫೨

ವಿ. ಕೃ. ಗೋಕಾಕ

ಪ್ರಕಾಶಕರ ಅರಿಕೆ

ಸಾಹಿತ್ಯ, ಸಂಗೀತ, ಚಿತ್ರಕಲೆ, ನೃತ್ಯ, ನಾಟಕ–ಇತ್ಯಾದಿ ಕಲಾಕ್ಷೇತ್ರಗಳ ಮೇಲೆ ಒಂದು ಪ್ರಗತಿಪರ ಪ್ರಭೆ ಬೀರುವ ಧ್ಯೇಯದೊಂದಿಗೆ 'ಅರವಿನ ಪಂಜ'ನ್ನು ಹಿಡಿದು ಹೊರಟಿರುವ ನಮ್ಮ 'ಯುವಕ ಕಲಾವೃಂದ'ವು ಇಷ್ಟರಲ್ಲಿಯೇ ಇಲ್ಲಿಯ ರಸಿಕರಿಗೆ ತನ್ನ ಅಳಿಲು ಸೇವೆಯನ್ನು ಸಲ್ಲಿಸಿದೆ. ಈ ಪಂಜಿನ ಬೆಳಕು ಯುವಜನರ ಮನಸೇರಿ ಅವರ ಸುಪ್ತಚೈತನ್ಯವನ್ನು ಜಾಗೃತಗೊಳಿಸಿದರೆ ನಮ್ಮ ಪ್ರಯತ್ನ ಫಲಿಸಿದಂತೆ.

ನಮ್ಮ ವೃಂದದ ಸಾಹಿತ್ಯಪ್ರಕಾಶನದ ಬಹುದಿನದ ಆಸೆ ಇದೀಗ ಫಲಿಸಿ ರಸಿಕರೆದುರು 'ಅನ್ನ'ದ ರೂಪ ತಾಳಿ ನಿಂತಿದೆ. ಈ 'ಅನ್ನ'ದ ರುಚಿ ಓದುಗರ ಅಭಿರುಚಿಯನ್ನು ಅವಲಂಬಿಸಿದೆ. ಒಮ್ಮೊಮ್ಮೆ ಒಂದೊಂದು ಅಗಳು ಶೀರ ಕಹಿಯೂ ಅನಿಸಬಹುದು ಆದರೂ ಅಧರಕ್ಕೆ ಕಹಿಯಾದುದು ಉದರಕ್ಕೆ ಸಿಹಿ ತಾನೆ?

ಈ ಪುಸ್ತಕ ಪ್ರಕಾಶನದ ಕಾರ್ಯಭಾರದಲ್ಲಿ ಸಹಭಾಗಿಗಳಾಗಿ ಸಕ್ರಿಯ ಸಹಾಯ ಸಲ್ಲಿಸಿದ ಶ್ರೀಗಳಾದ ಬಾಬಾಸಾಹೇಬ ಚಂಡಕೆ, ಭೂಪಾಲ ಪಡಸಲಗಿ, ಈಶ್ವರ ಕಲಾದಗಿ—ಇತ್ಯಾದಿ ಮಿತ್ರವೃಂದಕ್ಕೆ ನಮ್ಮ ಅನಂತ ಅಭಿವಂದನೆಗಳು. ಪುಸ್ತಕವನ್ನು ಸಕಾಲಕ್ಕೆ ಅಚ್ಚು ಹಾಕಿಕೊಟ್ಟ ಕೃಷ್ಣ ಮುದ್ರಣಾಲಯದ ಒಡೆಯರಿಗೂ ನಾವು ಋಣಿಯಾಗಿದ್ದೇವೆ. ಕರಡು ತಿದ್ದುವಲ್ಲಿ ನೆರವಾದ ಗೆಳೆಯ ಶ್ರೀ ಎಸ್ ಸಿ. ಹಿರೇಮಠರಿಗೂ ನಮ್ಮ ಕೃತಜ್ಞತೆಗಳು ಸಲ್ಲಬೇಕು.

ತಾವು ಅಡಿಗೆ ಮಾಡಿ ಅಣಿಗೊಳಿಸಿದ 'ಅನ್ನ'ವನ್ನು ರಸಿಕರಿಗೆ ಉಣಬಡಿಸಲು ಅನುಮತಿಯನ್ನಿತ್ತ 'ಎಮ್‌ಟೀ' ಮಿತ್ರದ್ವಯರಿಗೆ ನಮ್ಮ ವೃಂದ ಚಿರಋಣಿ.

ರಸಿಕ ವಾಚಕರು ಈ ಕಿರಿಹೊತ್ತಿಗೆಯನ್ನು ಸಾದರಪೂರ್ವಕವಾಗಿ ಸ್ವೀಕರಿಸುವರೆಂದು ನಂಬಿದ್ದೇವೆ.

ಯುವಕ ಕಲಾವೃಂದ
ಬೆಳಗಾವಿ

ಬಿ. ಎ. ಸನದಿ

ನಮ್ಮ ನುಡಿ

ಕನ್ನಡ ಸಾಹಿತ್ಯ ವೈವಿಧ್ಯ-ವಿಸ್ತಾರಗಳಿಗೆ ದಾರಿ ಮಾಡಿ ಕೊಟ್ಟ ಹಲವು ರೂಪವಿಶೇಷಗಳಲ್ಲಿ 'ಚುಟುಕು' ಎಂಬುದೂ ಒಂದು. ಈ ರಂಗದಲ್ಲಿ ಆಗಬೇಕಿದ್ದಷ್ಟು ಪ್ರಯತ್ನ ನಮ್ಮ ಸಾಹಿತ್ಯದಲ್ಲಿ ಆಗಿಲ್ಲ. ಆ ದಿಸೆಯಲ್ಲಿ ನಾವಾದರೂ ಮುನ್ನಡೆಯುತ್ತಿರುವುದು ಇದೇ ಮೊದಲು. ರಸಿಕರಿಗೆ ಈ 'ಅನ್ನದ' ಒಂದೆರಡು ಅಗಳುಗಳಾದರೂ ರುಚಿಸಿದರೆ ಸಾಕು; ನಾವು ಕೃತಾರ್ಥರಾದಂತೆಯೇ.

ಹೊಸತನವನ್ನು, ಹೊಸಬರನ್ನು, ಹಸನಾದ ಮನಸ್ಸಿನಿಂದ ಬರಮಾಡಿಕೊಳ್ಳುವವರೂ, ಹಿರಿಯ ಸಾಹಿತಿಗಳೂ ಆದ ಪ್ರಿ. ವಿ. ಕೃ. ಗೋಕಾಕ ಅವರು ನಮ್ಮ ಬಿನ್ನಹವನ್ನು ಮನ್ನಿಸಿ ಈ ಕಿರುಹೊತ್ತಿಗೆಗೆ ಮುನ್ನುಡಿಯನ್ನು ಬರೆದುಕೊಟ್ಟು ನಮಗೆ ಹರಕೆಯನ್ನಿತ್ತುದಕ್ಕಾಗಿ ನಾವವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಯುವಕ ಕಲಾವೃಂದದ ಗೆಳೆಯರು ಈ 'ಅನ್ನ'ವನ್ನು ರಸಿಕರಿಗೆ ನೀಡುವಲ್ಲಿ ತುಂಬಾ ಶ್ರಮವಹಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಹಾರ್ದಿಕ ಅಭಿವಂದನೆಗಳು.

ಬೆಳಗಾವಿ
೧೦-೪-೧೯೫೨

'ಎಮ್ ಟೀ'

“ ನಾಡಿನ ಹಿರಿ ಕಿರಿ
ಮಕ್ಕಳಿಗೀ ಮರಿ
ಪುಸ್ತಕವನು ನಾ ನೀಡುವೆನು
ಚಿಕ್ಕವರೆಲ್ಲಾ
ದೊಡ್ಡವರಾಗಿ
ದೊಡ್ಡವರೆಲ್ಲಾ
ಚಿಕ್ಕವರಾಗಿ
ಬೆಳೆಯುವುದನು ನಾ ನೋಡುವೆನು ”

— ವಿ. ಜಿ. ಭಟ್ಟ

ಭಾಗ ಒಂದು

ಎಂ. ಅಕಬರ ಅಲಿ

*

ಅನ್ನ

ಅಪ್ಪ ಅನ್ನ ಅಣ್ಣ
ದುಡಿದು ದುಡಿದು ಸಣ್ಣ
ಆದರೂನು
ದೊರೆಯಲಿಲ್ಲ
ಒಂದು ತುತ್ತು ಅನ್ನ

ರೈತ

'ರೈತ ಹಿಡಿದ ನೇಗಿಲ
ಅದುವೆ ಸುಖದ ಬಾಗಿಲ'
ಎಂದು ಕೂಗಿ
ಹೇಳುತಿಹುದು
ಕೇಳು, ಅದೋ ಕೋಗಿಲ !

ಊರ ಗೌಡ

ನಮ್ಮ ಊರ ಗೌಡ
ಸುತ್ತಿಕೊಳುವ ಪೌಡ
ಬಡವ ಜನರ
ಕುಟ್ಟಿ ಕುಟ್ಟಿ
ಮಾಡಿ ಬಿಡುವ ತೌಡ

ಭಂಗಿ

ಮೈಗೆ ಹರಕು ಅಂಗಿ
ನಡಕೆ ಕೊಳಕು ಲುಂಗಿ
ದುಡಿದು ದುಡಿದು
ಮುಡಿಯುತಿಹನು
ಪಾಪ ಬಡವ ಭಂಗಿ

ಜುಟ್ಟು–ಹೊಟ್ಟೆ

ಜುಟ್ಟಿದವರೆ ಭಟ್ಟರು
ಹೊಟ್ಟೆಯವರೆ ಸೆಟ್ಟರು
ಜುಟ್ಟು-ಹೊಟ್ಟೆ
ಇಲ್ಲದವರೊ
ಬಡವರಾಗಿ ಕೆಟ್ಟರು

ಮುಲ್ಲಾ

ನಮ್ಮ ಊರ ಮುಲ್ಲಾ
ಮೋಹರಮ್‌ದಲೆಲ್ಲಾ
ಮಂತ್ರವೆಂದು
ಏನೊ ಗೊಣಗಿ
ಗಿಟ್ಟಿಸುವನು ಬೆಲ್ಲಾ

ಪುಂಡ ಗುಂಡ

ನಮ್ಮ ಗೆಳೆಯ ಗುಂಡ
ಕ್ಲಾಸಿನಲ್ಲೆ ಪುಂಡ
ಹೇಳಿದರೂ
ಕೇಳಲಿಲ್ಲ
ಕೊನೆಗೆ ಆಯ್ತು ದಂಡ

ಸಾಬ

ಹೋತಿನಂಥ ಮೋತಿ
ಅವನೆ ಸಾಬ ಜಾತಿ
ಗಡ್ಡದಣ್ಣ-
ಗಿಹುದು ಚೊಣ್ಣ !
ಅವನಿಗೆಲ್ಲಿ ಧೋತಿ ?

ಬಂದಿ

ಒಂದು ಹರಕು ಚಿಂದಿ
ಇಲ್ಲದಂಥ ಮಂದಿ
ದೇಶವೆಂಬ
ಸೆರೆಯಲಿಂದು
ಆಗಿರುವದು ಬಂದಿ

ಊರ ಸುಲಿಗೆ

ನಮ್ಮ ಊರ ಸೆಟ್ಟರು
ದೇಶಪಾಂಡೆ ಭಟ್ಟರು
ಗೌಡರೆಲ್ಲ
ಕೂಡಿಕೊಂಡು
ಊರ ಸುಲಿದು ಬಿಟ್ಟರು

ರಾಮರಾಜ್ಯ

ನಮ್ಮ ರಾಮರಾಜ್ಯ-
ದಲ್ಲಿ ಇಲ್ಲ ವ್ಯಾಜ್ಯ
ರಾಮಭಕ್ತ
ಹನುಮನಂತೆ
ವಾಸಿಸುವುದೆ ಪೂಜ್ಯ !

ಉದ್ದು

ಕವಿಗಳುದ್ದು ಕತ್ತಿಗೆ
ನಾಲಗೆಯೋ ಅತ್ತಿಗೆ
ಮೂಗು ಕರಿಗೆ
ಬಾಲ ಕಪಿಗೆ
‘ಕೋಡು’ ಮಂತ್ರಿವರ್ಯರ್ಗೆ

ಕಾಮಧೇನು

ಸಕಲ ಬಯಕೆಗಳನು
ಫಲಿಸಿಕೊಳಲು ನೀನು
ಮಂತ್ರಿ ಅಳಿಯ
ಆಗೊ ಗೆಳೆಯ
ಅದುವೆ ಕಾಮಧೇನು !

ಉಡುಪಿ ದೇವ

ಉಡುಪಿ ಮಠದ ದೇವ
ಜನಕೆ ತೀರ್ಥನೀವ
ಎಂದೆ ಜನರು
ಧ್ಯಾನಿಸುವರು
ದಿನದ ಎಲ್ಲ ಜಾವ

ವಸಂತ

ವಸಂತ ಬಂದ
ಚಿಗುರನು ತಂದ
ಒಣ ಒಣ
ಭಣ ಭಣ
ಎಲ್ಲವ ಕೊಂದ

ಮೌಲ್ವಿ

ಐದು ಹೊತ್ತು ನಮಾಜ
ಮಾಡುತಿದ್ದು, ಸಮಾಜ
ಸುಲಿಯುವಂಥ
ಮೌಲ್ವಿಗೆ ಮತ-
ದುರಭಿಮಾನ ಸಾಜ

ಮುದುಕಿ

ಮುದುಕಿ ಹಣ್ಣು ಹಾಗಲು
ಆಗಿ ದೇಹ ಬಾಗಲು
ಕೈಲಿ ಕೋಲು
ಹಿಡಿದಿರುವಳು
ಬಾಳನೆಂತೊ ನೀಗಲು

ಭಾನುವಾರ

ವಾರದಾರು ದಿನ
ದುಡಿದು ದುಡಿದು ಹೆಣ
ಭಾನುವಾರ
ಎಂದರಾಯ್ತು
ಕುಣಿಯುತ್ತೈತೆ ಮನ !

ಚೆಂದ

ನೊಗಕೆ ಚೆಂದ ಮೂಗು
ಖಗಕೆ ಚೆಂದ ಕೂಗು
ಮಂತ್ರಿ ಜನಕೆ
ಚಿಂತಿಸುವುದೆ
ಜನದ ಆಗು-ಹೋಗು

ಜಾತಿ

ಅವನ ಜಾತಿ ಮೇಲು
ಇವನ ಜಾತಿ ಕೀಳು
ಎಂಬ ಜಗಳ-
ದಿಂದ ಹಾಳು
ಆಯಿತೆಮ್ಮ ಬಾಳು

ಧನದ ಮಾರಿ

ನಮ್ಮ ರಕ್ತ ಹೀರಿ
ಪಿತ್ತ ನೆತ್ತಿಗೇರಿ
ಕೋತಿಯಂತೆ
ಕುಣಿಯುತಿಹಳು
ಅಯ್ಯೊ, ಧನದ ಮಾರಿ !

ಆಳು

ನಮ್ಮ ಆಳು ಭರಮ
ಅಪ್ಪನೆದುರು ನರಮ
ನಮ್ಮ ಪುಟ್ಟು
ಎಂದರವಗೆ
ಉಕ್ಕುತೈತೆ ಪ್ರೇಮ !

ಬೆಂಕಿ–ಜಿಗಿತ

ನೋಹರನ್ಮದಲ್ಲಿ
ನನ್ನ ಗೆಳೆಯ ‘ಅಲ್ಲಿ’
ದೇವ್ರು ತುಂಬಿ–
ತೆಂದು ನಂಬಿ
ಜಿಗಿದ ಬೆಂಕಿಯಲ್ಲಿ

ಸೆರೆಯ ಗುಂಗು ಹಿಂಗಿ
ಕಾಲ ಗಾಯ ಜಂಗಿ
ಆಗಿ ಆತ
ನರಳಿ ಸೋತ
ನೋವ ನುಂಗಿ ನುಂಗಿ

ಗೆಳೆಯರು

ಗೆಳೆಯರಾಗಿ ಕೂಡಿ
ನಕ್ಕು ಕೆಲೆದು ಆಡಿ
ಎರಡು ಜೀವ
ಒಂದೆ ಭಾವ
ಎನುವೊಲಿಹೆವು ಜೋಡಿ !

ಅನ್ನ

ಕಪಿ-ಕವಿ

'ಊರು ಸುಟ್ಟರೇನು ?
ಊರ ಹೊರಗೆ ನಾನು !'
ಎಂದುಕೊಳುವ
ಕವಿಗೆ ಬಹುದು
ಕಪಿಯ ಬಿರುದು ತಾನು !

ಕೊಳಕು-ಕೊಂಕು

ಕೊಳಕು ನುಡಿಯು ಸಲ್ಲದು
ಕೊಂಕು ನಡೆಯು ಹೊಲ್ಲದು
ಕೊಳಕು–ಕೊಂಕು
ತನದ ಬಿಂಕು
ಕೊನೆಯ ವರೆಗು ನಿಲ್ಲದು

ಮನದ ಕೊಳೆ

ರೈತ ಕಿತ್ತು ಕಳೆ
ಬೆಳೆಯುವಂತೆ ಬೆಳೆ
ಮನದ ಕೊಳೆ
ಮೊದಲು ತೊಳೆ
ಕೊನೆಗೆ ಹೊರಗೆ ಹೊಳೆ

ಒಂದು ಸಂಜೆ

ಗಂಟುಮೋರೆ ಮಾಡಿಕೊಂಡು
ಮನೆಗೆ ಬಂದ ಅಪ್ಪನು
ನನ್ನ ತಾಯಿ ಸಡಿಲು ಬಾಯಿ
ಮಾಡಿಕೊಂಡು ತಪ್ಪನು

ಗುಡುಗು ಹಾಕಿ ಸಿಡಿಲಿನಂತೆ
ಹೊಡೆಯೆ ಅಪ್ಪ ಧೊಪ್ಪನೆ
ನೋಡ ಮಳೆಯುಗರೆಯುವಂತೆ
ಅತ್ತಳವ್ವ ತೆಪ್ಪನೆ

ಕಾಳಸಂತೆ

ಕಾಳ ಸರ್ಪದಂತೆ
ಬಂದು ಕಾಳಸಂತೆ
ವಿಷವ ಕಾರಿ
ಜೀವ ಹೀರಿ
ತಂದಿತೆಮಗೆ ಚಿಂತೆ

ಮಳೆ-ಬಿಸಿಲು

ಕಟ್ಟಿತು ಮುಗಿಲು
ಕಾಮನ ಬಿಲ್ಲು
ತೋರಣವನು ಬಲು
ಚೆಂದದಲಿ

ಮಳೆ–ಬಿಸಿಲುಗಳಿಗೆ
ಮದುವೆಯು ಆಗೆ
ನಕ್ಕಿತಿಳೆಯು ಆ–
ನಂದದಲಿ

ಚಿನ್ನದ ಬದುಕು

ಆಡುವಾಗ ಆಡು
ಮಾಡುವುದನು ಮಾಡು
ಆಗ ನಿನ್ನ
ಬದುಕು ಚಿನ್ನ
ಆಗತ್ತೈತೆ ನೋಡು

ಭಾಗ ಎರಡು

ತೋಫಖಾನೆ ಶ್ರೀನಿವಾಸ

*

ಅನ್ನ

ಹೊಟ್ಟೆಗೆ ದೊರೆತರೆ ಹಿಡಿ ಅನ್ನ
ಎಲ್ಲರಿಗದುವೆಯೆ ಬಲು ಚೆನ್ನ
ಅನ್ನವೆ ಸಿಗದಲೆ
ಹೋದರೆ, ಕ್ಷಣದಲೆ
ನೀತಿಯು ಗೀತಿಯು ವಿಚ್ಛಿನ್ನ !

ಹಾಲು

ಮಗುವು ಕಿರಿಕಿರಿ ಮಾಡಿತು
ತಾಯ ಪರಿಪರಿ ಕಾಡಿತು
ಹಾಲು ಹೊಟ್ಟೆಗೆ
ಬಿದ್ದ ಪೆಟ್ಟಿಗೆ
ಕೇಕೆ ಹಾಕುತ ಹಾಡಿತು !

ಸಕ್ಕರೆ

ಸವಿಯ ಸೂರೆ ಸಕ್ಕರೆ !
ಯಾರಿಗಿಲ್ಲ ಅಕ್ಕರೆ ?
ಬಡವ ತಾನು
ಕೊಳ್ಳನೇನು
ತನಗೆ ಹಣವು ಸಿಕ್ಕರೆ ?

ಹೊಟ್ಟೆಬಾಕ

ಸೇರವಲಕ್ಕಿಯ ಪಕಾಪಕಾ
ತಿಂದನು ಅನ್ನುತ ‘ ಏನು ಸುಕಾ ! ’
ನೀರನು ಕುಡಿಯಲು
ಹೊಟ್ಟೆಯು ಕಡಿಯಲು
ಕಾರಿದ ಎಲ್ಲವ ಬಕಾಬಕಾ !

ಭಟ್ಟ

ತಲೆಯ ಮೇಲೆ ಜುಟ್ಟು
ಹಣೆಗೆ ಗಂಧವಿಟ್ಟು
ನೂರು ಸುತ್ತು
ದಾರ ಹೊತ್ತು
ಭಟ್ಟನಾದ ಕಿಟ್ಟು

ಮಾಸ್ತರು

ನಮ್ಮ ಕ್ಲಾಸ ಮಾಸ್ತರು
ಹೇಳಿ ಕೇಳಿ ಸುಸ್ತರು
ಲಂಬಕರ್ಣ
ಕುಂಭಕರ್ಣ
ಅವರೆ ಇವರ ದೋಸ್ತರು !

‘ ಒಂದೂಟ ’

‘ ಬಿಡಿರಲೆ ವಾರಕೆ ಒಂದೂಟ ’
ಎಂಬುದು ಬಾಯಲಿ ಬಲು ಮಾಟ
ಹಣ್ಣನು ತಿನ್ನಲು
ಹಣವೇ ಇಲದಿರೆ
ಆಗಲೆ ತಿಳಿವುದು ಇವರಾಟ !

ಕರಿ ಬೆಕ್ಕು

ಕರಿಯದೊಂದು ಬೆಕ್ಕು
ಅಡಿಗೆ ಮನೆಯ ಹೊಕ್ಕು
ಹಾಲು ಕುಡಿದು
ಗಡಿಗೆ ಒಡೆದು
ಹೋಯ್ತು, ಏನು ಸೊಕ್ಕು !

ಸ್ವಾಮಿ

ಸ್ವಾಮಿಯು ಹೊರುತಲಿ ಶಾಟಿಯನು
ವಂಚಿಸುವನು ಜನಕೋಟಿಯನು
ಜಂಬವ ಕೊಚ್ಚುತ
ಕುಟಿಲತೆ ಮುಚ್ಚುತ
ತೀರಿಸ ಬಗೆ ಬಗೆ ತೀಟಿಯನು

ಡಾಂಭಿಕ

ತುಪ್ಪದ ದೀವಿಗೆಯನು ಹಚ್ಚಿ
ತೆಂಗಿನ ಕಾಯೊಂದನು ಚಚ್ಚಿ
ಕಲ್ಲಿಗೆ ಬಾಗುತ
ಡಾಂಭಿಕನಾಗುತ
ನೆರೆದರೆ ಹರಸನು ಶಿವ ಮೆಚ್ಚಿ !

ಬಂಟರು

ಭಟ್ಟರು ಬಂಟರು ಊಟದಲಿ
ತುಂಟರು ಬಲು ಜಗಳಾಟದಲಿ
ಹೆಂಡಿರು ಹಟದಲಿ
ಹುಡುಗರು ಚಟದಲಿ
ಮಂತ್ರಿಗಳೋ ಕಂತ್ರಾಟದಲಿ

ತುಂಟ

ಹುಡುಗನೊಬ್ಬ ತುಂಟ
ಕುಡುಕನಂತೆ ಹೊಂಟ
ಕಾರು ಹಾದು
ಕಾಲು ಮುರಿದು
ಆಗಿ ಬಿಟ್ಟ ಕುಂಟ

ದಡ್ಡ

ಪುಸ್ತಕ ಲೇಖನಿ ಮಸಿಕುಡಿಕೆ
ಕಂಡರೆ ದಡ್ಡಗೆ ಎದೆಯೊಡಿಕೆ
ಪುಸ್ತಕದಿಂದಲೆ
ಯಶ ನಿನಗೆಂದರೆ
ಎನುವನು ಮಾತಿದು ಬಡಬಡಿಕೆ

ಬಡವಿ

ಆವಳು ಬಡವಿಯಂತೆ
ಹಗಲು ಇರುಳು ಚಿಂತೆ
ಮಾಡಿ ಮಾಡಿ
ದಿನವ ದೂಡಿ
ಬಾವಿ ಬಿದ್ದಳಂತೆ !

ಹಳ್ಳಿಗ

ಹೊರಟಿತು ಪೋಲೀಸರ ದಂಡು
ಹಳ್ಳಿಗ ಅಂಜಿದ ಇದ ಕಂಡು
ಬಂದೂಕುಗಳು
ತನ್ನೆದೆಗೇಳು
ಹಾರಿಸಿದಂತಾಯಿತು ಗುಂಡು !

ಬಿಳಿ ಕಳ್ಳರು

ನಮ್ಮ ಜನಗಳು ಮಳ್ಳರು
ಜಗಳದಿಂದಲೆ ಪೊಳ್ಳರು
ಇದನು ತಿಳಿದು
ನಾಡ ಸುಲಿದು
ಜಿಟ್ಟರ್ಕೈ ಬಿಳಿ ಕಳ್ಳರು

ಅಪ್ಪ-ಮಗ

ಅಪ್ಪ ತಿಮ್ಮಣಭಟ್ಟನು
ಕಚ್ಚೆ ಪಂಚೆಯು ಉಟ್ಟನು
  ಪೂಜೆ ಮಾಡಲು
  ಕೆಳಗೆ ಕೂಡಲು
ಕಚ್ಚೆ ಉಚ್ಚೀ ಬಿಟ್ಟಿತು
ಪೂಜೆ ಕೊನೆಯನು ಮುಟ್ಟಿತು

ಕಂಡನಿದ ಮಗ ಪುಟ್ಟನು
ಪಂಚೆ ತಾನೂ ಉಟ್ಟನು
  ದೇಹ ಚಿಕ್ಕದು !
  ಪಂಚೆ ಉಚ್ಚದು !!
ತಾನೇ ಕಚ್ಚೆಯ ಬಿಡಿಸಿದ
ಪೂಜೆ ಮುಂದಕೆ ನಡೆಸಿದ

ಅತ್ತೆ-ಸೊಸೆ

ಅತ್ತೆ ಹಲ್ಲಸು ಕರಕರಾ
ತಿನಲು ಸೊಸೆಂಗೋ ಸರಸರಾ
  ಕೆರೆಗೆ ಹೋದಳು
  ಜೀವ ತೊರೆದಳು

ನೈವೇದ್ಯ

ಶಿವನೆದುರಿಡುವರು ನೈವೇದ್ಯ
ಇದರೊಳಗೇನೋ ಇದೆ ಚೋದ್ಯ
ದೇವನು ಅನ್ನವ
ತಿನ್ನನು ಎನ್ನುವ
ಭರವಸೆಯಿಂದಲೆ ಇದು ಸಾಧ್ಯ !

ಅರ್ಜಿ

ತನಗೆ ಬಯಸಿ ಬಳಿತನು
ಸಾಲ ಮಾಡಿ ಕಲಿತನು
ಕೆಲಸ ಬೇಡಿ
ಅರ್ಜಿ ಮಾಡಿ
ಜಾಗ ಸಿಗದೆ ಕೊಳಿತನು

ಸಂಬಳ

ತಿಂಗಳ ಸಂಬಳ ಸಾಲದನು
ಸೆಟ್ಟಿಗೆ ಸಾಲವ ಕೇಳಿದನು
ಸಾಲವು ತೀರದು
ದಾರಿಯು ತೋರದು
ಗಳಗಳ ಅಳುತಲಿ ಗೋಳಿದನು !

ಓದು-ನಿದ್ದೆ

ಪುಸ್ತಕ ತೆರೆವರೆ ಆಕಳಿಕೆ
ಬರುವುದು ಭರದಲಿ ತೂಕಡಿಕೆ !
ಓದಿಗೆ ನಿದ್ದೆಗೆ
ಜಿದ್ದೇ ಬಿದ್ದಿದೆ
ಶಂಕರ, ಸಾಕೆಲೆ ಈ ಕಲಿಕೆ !!

ತಮ್ಮನ ಶ್ರೀಮುಖ

ಅಪ್ಪ ಹೋದ ಕೋರ್ಟಿಗೆ
ಅವ್ವ ಊರ ಹರಟೆಗೆ
ಅಣ್ಣ ಒರಟ್ಟೆ
ಬಿಟ್ಟೆ ಹೊರಟ
ಎಲ್ಲೊ ಚಹಾ ಪಾರ್ಟಿಗೆ !

ಕಡಿದಾಟ

ಜನರಿಗೆ ಏನಾಗಿದೆ ಧಾಡಿ ?
ನುಡಿಯುತಲಿರುವರು ಕಡಿದಾಡಿ
ತಪುಗಿಹ ಬುದ್ಧಿಯು
ಅರಿಂಬುದೆ ಗುದ್ದಿಯು
ಹೊತ್ತುದಕಾದರು ಸರಿಜೋಡಿ !

ದೋಸೆ

ಕಾಸಿ ಹಂಚನು ಸರ್ರನೆ
ಬಿಟ್ಟು ಹೊಯ್ಯುತ ಚೊರ್ರನೆ
ಅಮ್ಮ ಕೊಟ್ಟ
ದೋಸೆ ಪುಟ್ಟ
ತಿಂದು ತೇಗಿದ ಭರ್ರನೆ.

ಗಾಳಿಪಟ

ಅಪ್ಪನ ಎದುರಲಿ ಮಾಡಿ ಹಟ
ರಾಮನು ಕೊಂಡನು ಗಾಳಿಪಟ
ಗಾಳಿಯು ನುಗ್ಗಿತು
ದಾರವು ಜಗ್ಗಿತು
ಏರಿತು ಪಟವದು ಮುಗಿಲ ಮಟ!

ಕಾರು

ರೋಡ ಮೇಲೆ ಕಾರು
ಓಡುತಿತ್ತು ಜೋರು
ಗಾಳಿಗೂನು
ಹೇಳಿತೇನೊ
'ನನ್ನ ವೇಗ ಮೀರು!'

ಓಕಳಿ

ಸೋಮನೊಂದು ಸವಕಳಿ
ಆನೆ ಕೊಟ್ಟು ಜೀಕಳಿ
ಕೊಂಡು ಹಿಗ್ಗಿ
ಬಣ್ಣ ಜಗ್ಗಿ
ಉಗ್ಗಿ ಬಿಟ್ಟು ಓಕಳಿ

ಭಾಷಣ

ಗುರಿಯುನರಿಯುದ ಭಾಷಣ
ಬರಿದು ಬರಿದೋ ಘೋಷಣ !
ಮಾಡದೇಸೂ
ನಮಗೆ ಲೇಸು
ತರದು ರಾಷ್ಟ್ರಕೆ ಭೂಷಣ

ತುಂಬಿ

ಗಾಳಿ ಮೆಲ್ಲನೆ ಬೀಸಿತು
ಸುಮದ ವಾಸನೆ ಸೂಸಿತು
ಕಂಪು ಮೂಗಿಗೆ
ತಾಗಿದಾಗಲೆ
ತುಂಬಿ ಕುಸುಮವ ಮೂಸಿತು

ನಾಸಿಪುಡಿ

ಭಟ್ಟರ ನಾಸಿಕ ದೊಡ್ಡ ಪಡಿ
ಏರಿಸಿ ಏರಿಸಿ ನಾಸಿಪುಡಿ
ಸುಂಬಳ ಕಳೆದರೆ
ಸೀನನು ಸೆಳೆದರೆ
ಳಳಳಿಳಿ ಳುಳುಳೆಳೆ ಅವರ ನುಡಿ !

ಥ್ಯಾಟು

ತಲೆಯ ಮೇಲೆ ಹ್ಯಾಟು
ಮೈಯ ತುಂಬ ಸೂಟು
ಕೈಗೆ ನೋಟು
ಕಾಲ್ಗೆ ಬೂಟು
ಕೇಳಬೇಕೆ ಥಾಟು ?

ಕಾರಂಜಿ

ನೆಗೆವುದು ಮುಗಿಲಿಗೆ ಕಾರಂಜಿ
ಮರಳು [illegible]
[illegible]
[illegible]
ಅದಕಿ [illegible]

 ಅನ್ನ

ವಿಜಾಪುರದ ಇತಿಹಾಸದಲ್ಲಿ
ಮೂರು ಮರೆಯದ ಮಾತುಗಳು

೧೬೫೧

ಮಹಮ್ಮದ ಆದಿಲಶಹ **ಗೋಳಗುಮ್ಮಟ** ಕಟ್ಟಿಸಿದನು.

೧೯೨೩

ಶ್ರೀ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ
ಒಂಬತ್ತನೆಯ **ಕನ್ನಡ ಸಾಹಿತ್ಯ ಸಮ್ಮೇಲನ** ನೆರವೇರಿತು.

೧೯೫೧

ಸಿರಿಂಪೂರ ಸಹೋದರರಿಂದ

ಆಶಾ ಸಾಹಿತ್ಯ ಮಂದಿರದ ಸ್ಥಾಪನೆ.

— x —

**ಕಥೆ, ಕಾದಂಬರಿ, ಕವಿತೆ, ಕಲೆ,
ವಿಚಾರ, ವಿನೋದ, ವಿಡಂಬನ, ವಿಮರ್ಶೆ, ವಿಜ್ಞಾನ,
ಅರ್ಥಶಾಸ್ತ್ರ, ರಾಜಶಾಸ್ತ್ರ, ಇತಿಹಾಸ, ಸಂಶೋಧ,
ಆಧ್ಯಾತ್ಮಿಕ, ಧಾರ್ಮಿಕ, ನೈತಿಕ, ತಾತ್ವಿಕ,
ನಾಟಕ, ಜೀವನಚರಿತ್ರೆ, ದಿನಚರಿ,
ಪತ್ರ, ಪ್ರಬಂಧ, ಪ್ರವಾಸಪರಿಚಯ
ಪುಸ್ತಕಗಳಿಗಾಗಿ**

ಮತ್ತು

**ನೂತನ, ನಂದಿನಿ, ರಂಜನೆ, ರಂಗಭೂಮಿ, ತರಂಗ,
ತಾರಾ, ಅಂಕುಶ, ಪುಸ್ತಕಪ್ರಪಂಚ
ಪತ್ರಿಕೆಗಳಿಗಾಗಿ**

ಸಂದರ್ಶಿಸಿರಿ ಇಲ್ಲವೆ ಬರೆಯಿರಿ

ಆಶಾ ಸಾಹಿತ್ಯ ಮಂದಿರ

ಆಝಾದ ಬೀದಿ, ವಿಜಾಪುರ